ಹೊರಗನ್ನು ಅರಿತುಕೊಳ್ಳಲಾರಂಭಿಸಿದಳು. ಕೊಂಚ ಕಿರಿಕಿರಿಯಾದರೂ ತವರಿಗೆ ಓಡುತ್ತಿದ್ದಳು. ಅಂತೂ ಬದುಕು ಮತ್ತೆ ಹಳಿಗೆ ಬಂದಿತ್ತು.

ಎಲ್ಲ ನೋಡುತ್ತಲೇ ನಾವೂ ಬೆಳೆಯುತ್ತಿದ್ದೆವು. ಹತ್ತನೇ ತರಗತಿಯನ್ನು ಯಶಸ್ವಿಯಾಗಿ ಮುಗಿಸಿ ಪಿಯು ಕಾಲೇಜನ್ನು ಅಥಣಿಯಲ್ಲಿ ಓದುತ್ತಿದ್ದೆವು. ಆದರೆ, ದಾಟಲಾಗದೇ ಇಬ್ಬರೂ ಧುಮ್ಕಿ ಹೊಡೆದೆವು. ಆ ನೋವು ಒಂದೆಡೆಯಾದರೆ ಮನೆಯಲ್ಲಿ ಮತ್ತೆ ಆಘಾತಗಳಾಗಿದ್ದವು. ಹೃದಯಾಘಾತದಿಂದ ಅಪ್ಪ ನಿಧನಹೊಂದಿದರು. ಎರಡೇ ದಿನಗಳ ಅಂತರದಲ್ಲಿ ಕೃಷ್ಣಣ್ಣ ಹೊಲದಲ್ಲಿ ಹಾವು ಕಡಿದು ತೀರಿಕೊಂಡಿದ್ದ. ಇಬ್ಬರ ಮನೆಯಲ್ಲೂ ಸ್ಮಶಾನ ಮೌನ ಕವಿದಿತ್ತು. ಅಪ್ಪನ ಕಾರ್ಯಕ್ಕೆ ಬಂದ ಅಕ್ಕಂದಿರ ಬಳಿ ಬೈಸಿಕೊಂಡಿದ್ದೆ. 'ಅಚ್ಯುತನ ಕಡೆ ನೋಡಬ್ಯಾಡಾ. ಅವರಿಗೆ ಬೇಕಾದಷ್ಟು ಆಸ್ತಿ ಅದ. ಓದದಿದ್ರೂ ನಡೀತದ. ನಿಂದೇನ ಗತಿ?' ಎಂದು ಬಲವಂತವಾಗಿಯೇ ದೊಡ್ಡಕ್ಕ ತನ್ನೂರಿಗೆ ಕರೆದೊಯ್ದಿದ್ದಳು. ಹೋಗುವ ಹಿಂದಿನ ದಿನ ಅಚ್ಯುತನನ್ನು ಹೊಳೆದಂಡೆಯಲ್ಲಿ ಭೇಟಿಯಾಗಿದ್ದೆ. ಇಬ್ಬರೂ ಕಣ್ಣೀರಾಗಿದ್ದೆವು. 'ಇಬ್ಬರೂ ಒಬ್ಬರಿಗೊಬ್ಬರು ಸಮಾಧಾನ ಮಾಡಕೊಳ್ಳಬೇಕಂದ್ರ... ದೂರ ಆಗಲಿಕ್ಕತ್ತೇವಿ' ಎಂದಿದ್ದ ಅಚ್ಯುತ. 'ಲಗೂ ತಿರಗಿ ಬರ್ತೇನಿ ಬಿಡೊ... ಅಲ್ಲಿರೂದುಲ್ಲ...' ಎಂದು ಧೃಡವಾಗಿ ಹೇಳಿದ್ದೆ ನಾನು. ಆದರದು ಸಾಧ್ಯವಾಗಲೇ ಇಲ್ಲ. ಅಕ್ಕನ ಗಂಡ ಶಾಲೆಯಲ್ಲಿ ಮಾಸ್ತರು. ನಿತ್ಯ ಬಿಡದೇ ಓದಿಸಿದರು. ಅಲ್ಲಿಯೇ ಪರೀಕ್ಷೆ ಕಟ್ಟಿಸಿದರು. ಅಚ್ಯುತನೂ ಟ್ಯೂಷನ್ ತೆಗದುಕೊಂಡು ಪರೀಕ್ಷೆಗೆ ಕಟ್ಟಿದ್ದನಂತೆ. ಪರೀಕ್ಷೆ ಮುಗಿದ ಮರುದಿನವೇ ಬಸ್ಸು ಹತ್ತಿ ಶಿರಹಟ್ಟಿಗೆ ಬಂದಿದ್ದೆ. ಆಗಲೇ ಮತ್ತೊಂದು ಮರ್ಮಾಘಾತವಾಗಿತ್ತು. ಜೀವದ ಗೆಳೆಯ ಅಚ್ಯುತ ಹಿಂದಿನ ದಿನವೇ ಸುಳಿಯಲ್ಲಿ ಸಿಲುಕಿ ಮುಳುಗಿದ್ದ. ಊರಿಗೆ ಊರೇ ಕಣ್ಣೀರಾಗಿತ್ತು. ನಾನೂ ಕೃಷ್ಣೆಯಲ್ಲಿ ಬಿದ್ದು ಹುಡುಕೇ ಹುಡುಕಿದೆ. ನಮ್ಮಂಥ ಎಷ್ಟೋ ಜನ ಹುಡುಕಿದರೂ ಕೈಗೆ ಸಿಗದೇ ಹೋಗಿದ್ದ ಅಚ್ಯುತ. ನದಿ ಹರಿದಲ್ಲೆಲ್ಲ ದೂರ ಹುಡುಕಿ ನೋಡಿದರು. ಅವನ ಶವವೂ ಸಿಗಲಿಲ್ಲ. ನಾನು ಅವ್ವನ ಮಡಿಲಲ್ಲಿ ಹುದುಗಿ ಭೋರ್ಗರೆದು ಅತ್ತಿದ್ದೆ. ಮಂಕು ಕವಿದವನಂತೆ ಕುಳಿತಿದ್ದೆ. ಕೊನೆಗೆ ಸಂತೈಸಲು ಪದ್ದಕ್ಕನೇ ಬರಬೇಕಾಯಿತು. 'ಎಷ್ಟರ ತ್ರಾಸು ಮಾಡಕೋತೀಯೊ ಚಿದು. ನಿನ್ನ ನೋಡಿ ಅಂವ ಹೋದ ದುಃಖ ಮರೀಬೇಕಂದ್ರ ನೀನ ಹಿಂಗ ಮಾಡಿದ್ರ ಹೆಂಗ? ಅಂವ ಎಲ್ಲಿ ಹೋಗ್ಯಾನೊ ಏನೋ... ಒಂದಿಲ್ಲ ಒಂದಿನಾ ತಿರಗಿ ಬಂದ ಬರ್ತಾನ. ಆವಾಗ ನನ್ನ ಕಡೆ ಕರಕೊಂಡು ಬಾ. ನಾ ಅಂವನ ಸಲವಾಗಿ ಕಾಯ್ಲಿಕತ್ತೀನಂತ ಹೇಳು' ಎಂದು ಅತ್ತಿದ್ದರು. ಎಷ್ಟಾದರೂ ತಾಯಿ ಕರುಳು. ಮಗ ಸತ್ತನೆಂದು ನಂಬಲು ಸಿದ್ಧವಿರಲಿಲ್ಲ. ಶವವೂ ಸಿಕ್ಕಿರಲಿಲ್ಲವಲ್ಲ. ನನಗೂ ಹೌದಲ್ಲ... ಎನಿಸಿತು. ಅದೇ ಧಾಟಿಯಲ್ಲಿ ಸಂತೈಸಿಕೊಂಡೆ. ಒಂದಲ್ಲ ಒಂದು ದಿನ ನನ್ನ ಅಚ್ಚು ಬಂದೇ ಬರುತ್ತಾನೆ ಎಂದುಕೊಂಡೆ. ದಿನಗಳು ವೇಗವಾಗಿ ಕಳೆಯುತ್ತಿದ್ದವು. ಕೃಷ್ಣಣ್ಣನ ಹೆಂಡತಿಯನ್ನು ಅವಳ ತವರಿನವರು ಕಳಿಸಲೇ ಇಲ್ಲ. ಸುಶೀಲಾ ವೈನಿ ನಿಧಾನವಾಗಿ ತಳ ಊರಿದರು. ಅಣ್ಣನಿಗೆ ವರ್ಗವಾಗಿ ನಾವೂ ಧಾರವಾಡ ಸೇರಿದೆವು. ಗೆಳತಿಯರಿಬ್ಬರೂ ಅಗಲಲಾರದೇ ಅಗಲಿದರು. ನಾನೂ ಡಿಗ್ರಿ ಮುಗಿಸಿಕೊಂಡು ಬ್ಯಾಂಕ್ ಸೇರಿದೆ. ಅಲ್ಲಿ... ಇಲ್ಲಿ... ವರ್ಗವಾಗುತ್ತಿದ್ದರೂ ಅಚ್ಯುತನ ಮನೆಯ ಸುದ್ದಿ ಅಮ್ಮನಿಂದ ಗೊತ್ತಾಗುತ್ತಿತ್ತು. ಸುಶೀಲಾ ವೈನಿ ಮೋಹನಣ್ಣನ ಮೂಲಕ ಆಳುಗಳನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಂಡು ಜಮೀನು ಮಾಡಿಸುತ್ತಾರಂತೆ. ಇಬ್ಬರು ಮಕ್ಕಳು... ಅತ್ತೆಯನ್ನು ಸುಧಾರಿಸಿಕೊಂಡು ಮನೆತನವನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರಂತೆ. ಪದ್ದಕ್ಕ ಶೂರ್ಪಾಲಿಗೆ ಹೋದರೆ ಎಂಟೆಂಟು ದಿನ ಇದ್ದುಬಿಡುತ್ತಾರೆ. ಸ್ವಾದಿಗೆ ಹೋದರೆ ಮಠದಲ್ಲಿ ತಿಂಗಳುಗಟ್ಟಲೆ ಇರುತ್ತಾರೆ. ಮಗಳ ಬಳಿ ಹೋಗುತ್ತಾರೆ. ಶಿರಹಟ್ಟಿಯಲ್ಲಿರುವುದೇ ಕಡಿಮೆ... ಇತ್ಯಾದಿ ಸುದ್ದಿಗಳು ಆಗಾಗ ಅವ್ವನಿಂದ ತಿಳಿಯುತ್ತಿದ್ದವು. ನನಗೂ ಮದುವೆಯಾಗಿ ಮಗ, ಮಗಳು ಜನಿಸಿದರು. ತಲೆಯಲ್ಲಿ ಬೆಳ್ಳಿ ರೇಖೆಗಳೂ ಮೂಡಿ ತಲೆ ಸಪಾಟಾಯಿತು. ಭಾರತದಲ್ಲಿನ ಅನೇಕ ಊರುಗಳನ್ನು ತಿರುಗಿದ್ದಾಯಿತು. ಸದ್ಯ... ಕಾಶಿಯಲ್ಲಿ ಟ್ರೇನಿಂಗ್ ನಡೆದಿದೆ. ಇದೇ ನೆಪದಲ್ಲಿ ಮಡದಿ, ಮಕ್ಕಳನ್ನೂ... ಅಣ್ಣ, ಅಕ್ಕಂದಿರನ್ನೂ ಕರೆಸಿಕೊಂಡಿದ್ದೆ. ಎಲ್ಲರೂ ವಿಶ್ವನಾಥನ ದರ್ಶನ ಮಾಡಿ ಉತ್ತರ ಭಾರತವನ್ನೆಲ್ಲ ಸುತ್ತಿದರು. ಅಪ್ಪನ ಶ್ರಾದ್ಧವನ್ನು ಕಾಶಿಯಷ್ಟೇ ಅಲ್ಲ... ಗಯಾದಲ್ಲೂ ನೆರವೇರಿಸಿದೆವು. ಅವ್ವ ವಿಶ್ವನಾಥ, ವಿಶಾಲಾಕ್ಷಿಯರ ದರ್ಶನದಿಂದ ಸಂತುಷ್ಟಳಾಗಿದ್ದಳು. ಬನಾರಸಿ ಸೀರೆ ಖರೀದಿಸಿ ಕಾಶಿಯ